ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
ಕಾರ್ಯನಿರ್ವಾಹಕ ಕಛೇರಿ, ನೆಲಮಹಡಿ, ಬಿ.ಎಂ.ಟಿ.ಸಿ, ಯಶವಂತಪುರ, ಟಿ.ಟಿ.ಎಂ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು-560 022.
ದೂರವಾಣಿ: 080-43344334 ಫ್ಯಾಕ್ಸ್: (080) 43344376, ವೆಬ್‌ಸೈಟ್: www.kstdc.co

---

ಸಂಖ್ಯೆ:ಕರಾಪ್ರಅನಿ/ಆಡಳಿತ/ವಿ.ನಿ(2)/05/2019-20/ 859 ದಿನಾಂಕ: 29.06.2019
2-7-19

## ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅನುಚ್ಛೇದ 371(ಜೆ) ರಡಿ ಮೀಸಲಿರುವ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಹುದ್ದೆಗಳ ವಿವರ ಕೆಳಕಂಡತಿರುತ್ತದೆ.

| ಕ್ರ.ಸಂ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1 | ಸಹಾಯಕ ವ್ಯವಸ್ಥಾಪಕರು | 01 |
| 2 | ಅಡುಗೆಯವರು | 02 |
| 3 | ಸ್ವಾಗತಗಾರರು | 02 |
| 4 | ಸಹಾಯಕ ಪರಿಚಾರಕ ಕಂ ಬಾರ್‌ಮೆನ್ | 03 |
| 5 | ಸಹಾಯಕ ಬ್ಲಾಕ್‌ಸ್ಮಿತ್/ಟಿಂಕರ್/ವೆಲ್ಡರ್/ಪೈಂಟರ್ | 01 |
| 6 | ಮಾಣಿ | 03 |
| 7 | ಉಪಯೋಗಿ ಕೆಲಸಗಾರ | 05 |
| 8 | ಕಾವಲುಗಾರ | 02 |
| 9 | ರೂಂಬಾಯ್ | 02 |
| 10 | ಅಡುಗೆ ಸಹಾಯಕ | 01 |
| 11 | ಕ್ಲೀನರ್ | 01 |
| 12 | ಸ್ವೀಪರ್ | 02 |
| | **ಒಟ್ಟು ಹುದ್ದೆಗಳು** | **25** |

ವ್ಯವಸ್ಥಾಪಕ ನಿರ್ದೇಶಕರು

**ಷರತ್ತು ಮತ್ತು ನಿಬಂಧನೆಗಳು:**

- ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ತಮ್ಮ ಸ್ವವಿವರವನ್ನು ಭರ್ತಿ ಮಾಡಿ, ಅನುಚ್ಛೇದ 371(ಜೆ) ರಡಿ ನೀಡುವ ಅರ್ಹತಾ ಪ್ರಮಾಣ ಪತ್ರ, ವಿದ್ಯಾರ್ಹತೆ (Education qualification certificates) ಮತ್ತು ಸೇವಾ ಅನುಭವ ದಾಖಲೆಗಳು (Work Experience Certificates) ಮತ್ತು ಇತ್ತೀಚಿನ ಭಾವಚಿತ್ರದೊಂದಿಗೆ **ದಿನಾಂಕ:20.07.2019 ರೊಳಗೆ** ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು.

    ವ್ಯವಸ್ಥಾಪಕರು (ಆಡಳಿತ)
    ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿ.,
    ಕಾರ್ಯನಿರ್ವಾಹಕ ಕಛೇರಿ,
    ನೆಲಮಹಡಿ, ಯಶವಂತಪುರ ಟಿಟಿಎಂಸಿ,
    ಬಿ.ಎಂ.ಟಿ.ಸಿ ಬಸ್ ನಿಲ್ದಾಣ,
    ಯಶವಂತಪುರ ವೃತ್ತ,
    ಬೆಂಗಳೂರು-560 022.

- ಅಭ್ಯರ್ಥಿಗಳು ದಾಖಲಾತಿಗಳನ್ನೊಳಗೊಂಡ ಅರ್ಜಿಯನ್ನು ಮುಚ್ಚಿದ ಲಕೋಟೆ (Sealed Cover) ಸ್ಪೀಡ್ ಪೋಸ್ಟ್/ರಿಜಿಸ್ಟರ್ ಪೋಸ್ಟ್/ ಕೋರಿಯರ್ ಅಥವಾ ನೇರವಾಗಿ ಮೇಲೆ ತಿಳಿಸಿದ ವಿಳಾಸಕ್ಕೆ ಬಂದು ಸಲ್ಲಿಸಬಹುದಾಗಿದೆ.
- ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಪದನಾಮವನ್ನು ಲಕೋಟೆ/ಪೋಸ್ಟ್ ಕವರ್‌ನ ಮೇಲೆ ನಮೂದಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
- ಅಭ್ಯರ್ಥಿಯು ಕೇವಲ ಒಂದು ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚಿನ ಹುದ್ದೆಗೆ ಅರ್ಜಿ ಸಲ್ಲಿಸಿರುವುದು ಕಂಡು ಬಂದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
- **ದಿನಾಂಕ: 20.07.2019** ರ ನಂತರದಲ್ಲಿ ಸ್ವೀಕೃತಗೊಂಡ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
- ನಿಗಮವು ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ಸ್ವೀಕರಿಸಲು ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ.
- ನಿಗಮವು ನೀಡಿರುವ ನಮೂನೆಯಲ್ಲದೇ, ಇತರೆ ಯಾವುದೇ ನಮೂನೆಯಲ್ಲಿ ಸ್ವವಿವರವನ್ನು ಸಲ್ಲಿಸಿದರೆ ಯಾವುದೇ ಕಾರಣಕ್ಕೂ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

**ಮಾಹಿತಿ:**

- ಅನುಬಂಧ-1 ರಲ್ಲಿ ಹುದ್ದೆಗಳ ವಿವರ, ವಿದ್ಯಾರ್ಹತೆ ಮತ್ತು ಸೇವಾನುಭವದ ವಿವರವನ್ನು ನೀಡಲಾಗಿದೆ.
- ಅನುಬಂಧ-2 ರಲ್ಲಿ ಸ್ವ-ವಿವರದ ನಮೂನೆಯನ್ನು (Application Form) ನೀಡಲಾಗಿದ್ದು, ಸದರಿ ನಮೂನೆಯಲ್ಲಿಯೇ ಅರ್ಜಿಯನ್ನು ಸಲ್ಲಿಸತಕ್ಕದ್ದು.
- ವರ್ಗೀಕರಿಸಲಾದ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಅಭ್ಯರ್ಥಿಗಳ ವಿದ್ಯಾರ್ಹತೆ, ಅನುಭವ ಹಾಗೂ ಪರಿಣಿತಿಯನ್ನು ಆಧರಿಸಿ, 1:5 ಅನುಪಾತದಲ್ಲಿ ನಿಗದಿಪಡಿಸಲಾಗುವುದು.
- ಈ ಮೇಲ್ಕಂಡ ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಮತ್ತು ಸಂದರ್ಶನ ಕೈಗೊಳ್ಳಲು ದಿನಾಂಕವನ್ನು ನಿಗದಿಪಡಿಸಿ, ಅಭ್ಯರ್ಥಿಗಳಿಗೆ ಮಾಹಿತಿಯನ್ನು ನೀಡಲಾಗುವುದು.
- ಸದರಿ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು

# ಅನುಬಂಧ–1

## ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ 371(ಜೆ) ರಡಿಯಲ್ಲಿ ಮೀಸಲಿರುವ ಹುದ್ದೆಗಳ ವಿವರ–ವಿದ್ಯಾರ್ಹತೆ, ಸೇವಾನುಭವ

| ಕ್ರ.ಸಂ | ಹುದ್ದೆಗಳು | ಅನುಮೋದನೆಗೊಂಡ ಹುದ್ದೆಗಳ ಸಂಖ್ಯೆ | ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ವಯೋಮಿತಿ | ವಿದ್ಯಾರ್ಹತೆ | ಸೇವಾನುಭವ |
|---|---|---|---|---|---|
| 1 | ಸಹಾಯಕ ವ್ಯವಸ್ಥಾಪಕರು | 01 | 22 ರಿಂದ 50 ವರ್ಷಗಳು | ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (AICTE)/ಯು.ಜಿ.ಸಿ. ಯಿಂದ ಗುರುತಿಸಲಾದ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರಬೇಕು. | • ಖಾಸಗಿ/ಸರ್ಕಾರಿ ಸಂಸ್ಥೆಗಳ ಆಡಳಿತ ವಿಭಾಗದಲ್ಲಿ ಕನಿಷ್ಠ 3 ವರ್ಷಗಳು ಸೇವಾನುಭವ ಹೊಂದಿರಬೇಕು.<br>• ಸಮೂಹ ಪ್ರವಾಸೋದ್ಯಮ ಆಡಳಿತ (ಎಂಟಿಎ)/ಎಂಬಿಎ/ ಎಂಎಸ್‌ಡಬ್ಲ್ಯೂ (ಮಾನವ ಸಂಪನ್ಮೂಲ)/ ಪಿಜಿಡಿಎಂ(ಮಾನವ ಸಂಪನ್ಮೂಲ) ಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿದವರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುವುದು. |
| 2 | ಅಡುಗೆಯವರು | 02 | 30 ರಿಂದ 50 ವರ್ಷಗಳು | ಹೋಟೆಲ್ ಮ್ಯಾನೇಜ್‌ಮೆಂಟ್– ಐಹೆಚ್‌ಎಂ/ಎಫ್‌ಸಿಐ ಅಥವಾ ಯಾವುದೇ ವಿಶ್ವವಿದ್ಯಾಲಯದಲ್ಲಿ ತತ್ಸಮಾನ ಪದವಿ ಹೊಂದಿರಬೇಕು. | • ಯಾವುದೇ ಪ್ರತಿಷ್ಠಿತ ಹೋಟೆಲ್/ಉಪಹಾರ ಗೃಹಗಳಲ್ಲಿ ಮುಖ್ಯ ಅಡುಗೆಯವರಾಗಿ ಕನಿಷ್ಠ 10 ವರ್ಷಗಳು ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು.<br>• ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಕನಿಷ್ಠ 2 ವರ್ಷಗಳು ಸೌಸ್ ಶೇಫ್ ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು. |
| 3 | ಸ್ವಾಗತಗಾರರು | 02 | 18 ರಿಂದ 30 ವರ್ಷಗಳು | ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (AICTE)/ಯು.ಜಿ.ಸಿ. ಯಿಂದ ಗುರುತಿಸಲಾದ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರಬೇಕು. | • ಹೋಟೆಲ್ ಮತ್ತು ಉಪಹಾರ ಗೃಹಗಳಲ್ಲಿ ಸ್ವಾಗತಗಾರ/ಮುಂಭಾಗ ಕಛೇರಿ ವ್ಯವಸ್ಥಾಪಕರಾಗಿ ಕನಿಷ್ಠ 2 ವರ್ಷ ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು.<br>• ಪ್ರವಾಸೋದ್ಯಮ ಆಡಳಿತದಲ್ಲಿ ಸ್ನಾತಕೋತ್ತರ (ಎಂ.ಟಿ.ಎ) ಪದವಿ ಹೊಂದಿದ ಅಭ್ಯರ್ಥಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುವುದು. |
| 4 | ಸಹಾಯಕ ಪರಿಚಾರಕ ಕಮ್ ಬಾರ್‌ಮೆನ್ | 03 | 18 ರಿಂದ 30 ವರ್ಷಗಳು | ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (AICTE)/ಯು.ಜಿ.ಸಿ. ಯಿಂದ ಗುರುತಿಸಲಾದ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರಬೇಕು. | • ಯಾವುದೇ ಹೋಟೆಲ್/ಉಪಾಹಾರಗೃಹಗಳಲ್ಲಿ ಕನಿಷ್ಠ 2 ವರ್ಷಗಳು ಉಗ್ರಾಣಿಕರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು.<br>• ರೆಸ್ಟೋರೆಂಟರ್ & ಕೌಂಟರ್ ಸೇವೆಯ ನಿರ್ವಹಣೆಯಲ್ಲಿ ಪ್ರಮಾಣೀಕೃತ ಕೋರ್ಸ್‌ನ್ನು ಹೊಂದಿರಬೇಕು |

| ಕ್ರ.ಸಂ | ಹುದ್ದೆಗಳು | ಅನುಮೋದನೆಗೊಂಡ ಹುದ್ದೆಗಳ ಸಂಖ್ಯೆ | ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ವಯೋಮಿತಿ | ವಿದ್ಯಾರ್ಹತೆ | ಸೇವಾನುಭವ |
|---|---|---|---|---|---|
| 5 | ಸಹಾಯಕ ಬ್ಲಾಕ್‌ಸ್ಮಿತ್/ಟಿಂಕರ್/ವೆಲ್ಡರ್/ಪೈಂಟರ್ | 01 | 18 ರಿಂದ 35 ವರ್ಷಗಳು | ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (AICTE)/ಯು.ಜಿ.ಸಿ. ಯಿಂದ ಗುರುತಿಸಲಾದ ವಿಶ್ವವಿದ್ಯಾಲಯದಲ್ಲಿ ಐ.ಟಿ.ಐ ಪ್ರಮಾಣೀಕೃತ ಆಟೊಮೊಬೈಲ್ ಇಂಜಿನೀಯರಿಂಗ್ ನಲ್ಲಿ ಡಿಪ್ಲೋಮಾ ಪದವಿ ಪಡೆದಿರಬೇಕು. | • ಖ್ಯಾತ ಆಟೊಮೊಬೈಲ್ ಕಾರ್ಯಗಾರದಲ್ಲಿ ಕನಿಷ್ಠ 3 ವರ್ಷಗಳ ಸೇವಾನುಭವ ಹೊಂದಿರಬೇಕು. |
| 6 | ಮಾಣಿ | 03 | 18 ರಿಂದ 35 ವರ್ಷಗಳು | ಕನ್ನಡ ವಿಷಯವನ್ನೊಳಗೊಂಡಂತೆ ಕನಿಷ್ಠ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. | • ಯಾವುದೇ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಮಾಣಿಯಾಗಿ ಕನಿಷ್ಠ 2 ವರ್ಷಗಳು ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿರಬೇಕು. |
| 7 | ಉಪಯೋಗಿ ಕೆಲಸಗಾರ | 05 | 18 ರಿಂದ 35 ವರ್ಷಗಳು | ಕನ್ನಡ ವಿಷಯವನ್ನೊಳಗೊಂಡಂತೆ ಕನಿಷ್ಠ 7ನೇ ತರಗತಿ ತೇರ್ಗಡೆಯಾಗಿರಬೇಕು | • ಯಾವುದೇ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಉಪಯೋಗಿ ಕೆಲಸಗಾರರಾಗಿ ಕನಿಷ್ಠ 2 ವರ್ಷಗಳು ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿರಬೇಕು. |
| 8 | ಕಾವಲುಗಾರ | 02 | 18 ರಿಂದ 35 ವರ್ಷಗಳು | ಕನ್ನಡ ವಿಷಯವನ್ನೊಳಗೊಂಡಂತೆ ಕನಿಷ್ಠ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. | • ಕಾವಲುಗಾರನಾಗಿ ಕನಿಷ್ಠ 02 ವರ್ಷಗಳು ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿರಬೇಕು. |
| 9 | ರೂಂಬಾಯ್ | 02 | 18 ರಿಂದ 35 ವರ್ಷಗಳು | ಕನ್ನಡ ವಿಷಯವನ್ನೊಳಗೊಂಡಂತೆ ಕನಿಷ್ಠ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. | • ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಉಪಯೋಗಿ ಕೆಲಸಗಾರರಾಗಿ ಕನಿಷ್ಠ 2 ವರ್ಷಗಳು ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿರಬೇಕು. |
| 10 | ಅಡುಗೆ ಸಹಾಯಕ | 01 | 18 ರಿಂದ 35 ವರ್ಷಗಳು | ಕನ್ನಡ ವಿಷಯವನ್ನೊಳಗೊಂಡಂತೆ ಕನಿಷ್ಠ 7ನೇ ತರಗತಿ ತೇರ್ಗಡೆಯಾಗಿರಬೇಕು | • ಆಹಾರ ಕೌಶಲ್ಯ ಸಂಸ್ಥೆಯ (Food Craft Instiute) ವತಿಯಿಂದ ಹೋಟೆಲ್ ನಿರ್ವಹಣೆ ಅಥವಾ ಪಾಕಶಾಸ್ತ್ರ ಕುರಿತಂತೆ ಡಿಪ್ಲೋಮಾ ಹೊಂದಿರಬೇಕು.<br>• ಯಾವುದೇ ಹೋಟೆಲ್/ಉಪಾಹಾರಗೃಹಗಳಲ್ಲಿ ಕನಿಷ್ಠ 5 ವರ್ಷಗಳು ಅಡುಗೆ ಸಹಾಯಕರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು. |
| 11 | ಕ್ಲೀನರ್ | 01 | 18 ರಿಂದ 35 ವರ್ಷಗಳು | ಕನ್ನಡ ವಿಷಯವನ್ನೊಳಗೊಂಡಂತೆ ಕನಿಷ್ಠ 7ನೇ ತರಗತಿ ತೇರ್ಗಡೆಯಾಗಿರಬೇಕು | • ಪ್ರವಾಸೋದ್ಯಮ ಸಂಸ್ಥೆಯಲ್ಲಿ ಕನಿಷ್ಠ 02 ವರ್ಷ ಕ್ಲೀನರ್ ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು. |
| 12 | ಸ್ವೀಪರ್ | 02 | 18 ರಿಂದ 35 ವರ್ಷಗಳು | ಕನ್ನಡ ವಿಷಯವನ್ನೊಳಗೊಂಡಂತೆ ಕನಿಷ್ಠ 7ನೇ ತರಗತಿ ತೇರ್ಗಡೆಯಾಗಿರಬೇಕು | – |